ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ವೈ. ಜಿ. ಗುಡ್ಡ ಡ್ಯಾಂ ನಿರ್ವಹಣೆ ಬಗ್ಗೆ

ಶ್ರೀ ಅ. ದೇವೇಗೌಡ(ಪದವೀಧರರ ಕ್ಷೇತ್ರ) –

58 (329) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಮಾಡಬಾಳು ಹೋಬಳಿ, ವೈ. ಜಿ. ಗುಡ್ಡ ಡ್ಯಾಮ್ ಭಾರಿ ಮಳೆಯಿಂದಾಗಿ ತುಂಬಿದ್ದು, ಡ್ಯಾಮ್‌ನ ಗೇಟ್‌ನ್ನು ಸರಿಯಾಗಿ ಅಳವಡಿಸದೆ ಶೇಖರಣೆಯಾದ ನೀರು ಕೃಷಿ ಚಟುವಟಿಕೆಗೆ ಉಪಯೋಗವಾಗದೆ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಡ್ಯಾಮ್ ಕಾಮಗಾರಿಗಾಗಿ ಸರ್ಕಾರ ನಿಗಧಿಪಡಿಸಿದ್ದ ಅನುದಾನ ಎಷ್ಟು; ಕಾಮಗಾರಿಗಾಗಿ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; ಕಾಮಗಾರಿಗಾಗಿ ಖರ್ಚಾಗಿರುವ ಅನುದಾನ ಎಷ್ಟು; ಈ ಡ್ಯಾಮ್ ಕಾಮಗಾರಿ ಯಾವಾಗ ಮುಕ್ತಾಯಗೊಂಡಿರುತ್ತದೆ; (ಪೂರ್ಣ ಮಾಹಿತಿ ನೀಡುವುದು)

(ಇ) ಈ ಯೋಜನೆಯಿಂದ ಸುತ್ತಮುತ್ತಲ ಎಷ್ಟು ಗ್ರಾಮಗಳ ಗ್ರಾಮಸ್ಥರಿಗೆ ಕುಡಿಯುವ ನೀರಿನ ಸೌಲಭ್ಯ ದೊರಕಿದೆ; (ಮಾಹಿತಿ ನೀಡುವುದು)

(ಈ) ಡ್ಯಾಮ್ ಗೇಟ್‌ನ್ನು ಈವರೆವಿಗೂ ಸರಿಪಡಿಸದೆ ಜಲಾಶಯದ ನೀರು ಪೋಲಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)